ಸಪ್ಲೈ ಸ್ಕೀಮುಗಳಿಗೆ ಅನುಮತಿ ಕೊಟ್ಟಿದ್ದೇವೆ. ಈಗ ಪುರಸಭೆಗಳ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಅದಕ್ಕೆ ತಾವು ದೊಡ್ಡ ಮನಸ್ಸು ಮಾಡಿ ಸರ್ಕಾರದ ಕಡೆಯಿಂದ ಪೂರ್ಣವಾಗಿ ಹಣ ಕೊಟ್ಟು ಮಾಡಿಸಿ ತಕ್ಕಂಥ ಪ್ರಯತ್ನ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ.—ಪ್ರತಿವರ್ಷ ೯ ಕೋಟಿ ರೂಪಾಯಿಗೆ ಮೇಲೆ ವಾಟರ್‌ಬೋರ್ಡ್‌ಗೆ ಕೊಟ್ಟಿದ್ದಿಲ್ಲ. ಆದರೆ ನಾವು ಮುಂದಿನ ವರ್ಷದ ಮುಂಗಡ ಪತ್ರದಲ್ಲಿ ೨೦ ಕೋಟಿ ಕೊಟ್ಟಿದ್ದೇವೆ. ನೀವು ಅದನ್ನು ರಿಯಲೈಸ್ ಮಾಡಬೇಕು. ಅರ್ಬನ್ ವಾಟರ್ ಸಪ್ಲೈಗೆ ಹೆಚ್ಚಿನ ಮಹತ್ವ ಕೊಡಬೇಕು ಎಂದು ಮುಂದಿನ ವರ್ಷದ ಬಜೆಟ್‌ನಲ್ಲಿ ೨೦ ಕೋಟಿ ಕೊಟ್ಟಿದ್ದೇವೆ. ಅವರು ಹೇಳತಕ್ಕಂಥ ಸಮಸ್ಯೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾನು ಅವರ ಸಹಕಾರವನ್ನು ಕೇಳುತ್ತಾ ಇದ್ದೇನೆ. ನಾವೂ ಅವರೂ ಕೂಡ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಒತ್ತಾಯ ಮಾಡಬೇಕಾಗಿದೆ. ಅರ್ಬನ್ ವಾಟರ್‌ಸಪ್ಲೈಗೆ ಕೇಂದ್ರದಿಂದ ಒಂದು ಪೈಸೆ ಸಹಾ ಬರುತ್ತಾ ಇಲ್ಲ. ಕೇಂದ್ರ ಸರ್ಕಾರದಿಂದ ಸಹಾಯ ಬರಬೇಕು. ಆಗ ಹೆಚ್ಚಿನ ಪ್ರಮಾಣದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗಬಹುದು. ಆದರೆ ಮಾನ್ಯ ಸದಸ್ಯರು ಆಮೆಂಡ್‌ಮೆಂಟ್ ಬಗ್ಗೆ ಏನು ಹೇಳಿದ್ದಾರೆ ಅದು ನನಗೆ ಗೊತ್ತಿಲ್ಲ. ಅದನ್ನು ಪರಿಶೀಲಿಸುತ್ತೇನೆ. ಪುರಸಭೆಗೆ ಮತ್ತು ನಗರಸಭೆಗೆ ಸಹಾಯ ಮಾಡುವದಕ್ಕೆ ಸಾಧ್ಯವಾದರೆ ಮಾಡುತ್ತೇವೆ.

ಶ್ರೀ ಧರ್ಮಸಿಂಗ್.—ಮುಂದಿನ ವರ್ಷದಲ್ಲಿ ಬಜೆಟ್‌ನಲ್ಲಿ ೨೦ ಕೋಟಿ ಕೊಟ್ಟಿದ್ದೇವೆಂದು ಹೇಳಿದ್ದೀರಿ. ೧೯೮೭-೮೮ಕ್ಕೆ ಇದ್ದ ಬೇಡಿಕೆ ೫೮ ಕೋಟಿ ರೂಪಾಯಿಗಳು. ಆದರೆ ಮುಂದಿನ ವರ್ಷಕ್ಕೆ ೨೦ ಕೋಟಿ ಇಟ್ಟಿದ್ದೇವೆ ಎಂದು ಏನು ಹೇಳಿದ್ದೀರಿ, ಇದರಲ್ಲಿ ಯಾವ ವಾಟರ್ ಸಪ್ಲೈ ಸ್ಕೀಮನ್ನು ಮಂಜೂರು ಮಾಡಿಸುವುದಕ್ಕಾಗುವುದಿಲ್ಲ. ಈಗ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಎಲ್ಲಿ ಪ್ರಾರಂಭ ಮಾಡಿದ್ದೀರಿ ಅದನ್ನು ಮುಂಜೂರು ಮಾಡಿಸಬೇಕು ಎಂಬ ಮನಸ್ಸು ಸರ್ಕಾರಕ್ಕೆ ಇದ್ದರೆ ಕೊನೆಯ ಪಕ್ಷ ೧೦೦ ಕೋಟಿ ಆದರೂ ಕೊಡಿ. ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ.

SRI R. V. DESHPANDE.—Sir, during 1988-89 we had made a provision of rupees nine and one crores. But the Hon'ble Chief Minister in his Budget speech as given seven crores more this year. And for next year it will be 20 crores. Never in the history of the Water Board such an amount has been allotted to the Water Board. As you have rightly said we require 30 to 40 crores. How can the Government give? Government has got its own limitations. It is difficult to provide money at a stretch. ಆದುದರಿಂದ ಆದಷ್ಟು ಮಟ್ಟಿಗೆ ಸಮಸ್ಯೆಯನ್ನು ಆರ್ಥ ಮಾಡಿಕೊಂಡು ಇದನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಬಂಟ್ವಾಳದ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಮನಾಥ ರೈ.—೩ ಗ್ರಾಮಗಳು ಸೇರಿ ನಮ್ಮ ಪುರಸಭೆಯಾಗಿದೆ. ಇದಕ್ಕೆ ಶೇಕಡ ೭೫ ಭಾಗದಷ್ಟು ಗ್ರಾಮಾಂತರ ಪ್ರದೇಶಗಳಿಗೆ ಜಿಗತಕ್ಕ ಸೌಲಭ್ಯ ಸಿಕ್ಕಿಲ್ಲ. ಪುರಸಭೆಯಿಂದ ಜಿಗತಕ್ಕ ಸೌಲಭ್ಯ ಇಲ್ಲ. ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕು.....

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಗಲಾಟೆ ಕಡಿಮೆ ಮಾಡಿದರೆ ಬೋರ್‌ವೆಲ್ಸ್ ಮಾಡುತ್ತೇವೆ.

ACCOUNTS OPERATED BY MANDAL PANCHAYATS OF KOTTUR

222 (794) SRI K. V. RAVINDRANATH BABU.—Will the Minister for Rural Development and Panchayat Raj be pleased to answer for the following questions :

a) Whether it is not a fact that two accounts are being operated by Mandal Panchayats of Kottur as Account No. 1 and 2?

b) Whether it is also not a fact that the revenue collected by the Mandal Panchayats is remitted to these accounts ?

c) If so, whether Government would consider allowing the Mandal Panchayats to utilise the revenue collected by them for developmental works under a separate accouts operatable by them independent by ?

SRI M. P. PRAKASH (Hon'ble Minister for Rural Development and Panchayat Raj)

a) No.

b) Revenues collected by the Mandals are remitted to Account No. 1 only.

c) No.

ಸನ್ಮಾನ್ಯ ಉಪಾಧ್ಯಕ್ಷರೇ, ಮಂಡಲ ಪಂಚಾಯಿತಿ, ಕೊಟ್ಟೂರು ಎಂದು ಪ್ರಶ್ನೆ ಕೇಳಿದ್ದಾರೆ, ಕೊಟ್ಟೂರು ಪುರಸಭೆ ಎಂದು ತಿದ್ದಿಕೊಳ್ಳಬೇಕು.

ಶ್ರೀ ಕೆ.ವಿ. ರವೀಂದ್ರನಾಥ ಬಾಬು.—ಮಂಡಲದಲ್ಲಿ ಆಕೌಂಟ್ ನಂ. ೧ ರಲ್ಲಿ ನಾವು ರೊಕ್ಕ ಕಲೆಕ್ಟ್ ಮಾಡಿ ಕಟ್ಟುತ್ತಾ ಇದ್ದೇವೆ ಅದನ್ನು ಮಂಡಲದವರೇ ಉಪಯೋಗಿಸಿಕೊಳ್ಳುವುದಕ್ಕೆ ನೀವು ಪರ್ಮಿಷನ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ೨೫ ಸಾವಿರ ರೂಪಾಯಿಗಳನ್ನು ಮಂಡಲದ ಆಕೌಂಟ್ ನಂ. ೧ ರಲ್ಲಿ ಕಟ್ಟಿದ್ದೇವೆ. ಆದರೆ ಜಿಲ್ಲಾ ಪರಿಷತ್ತಿನ ಆಕೌಂಟ್ ನಂ. ೨ಗೆ ಬರುವುದು ೧೫ ಸಾವಿರ ಡ್ರಾ ಮಾಡಬೇಕು ಎಂದು ಬರುತ್ತದೆ. ಇದರಿಂದ ಹೆಚ್ಚಿನ ದುಡ್ಡು ಜಿಲ್ಲಾ ಪರಿಷತ್ತಿಗೆ ಕೊಟ್ಟ ಹಾಗೆ ಆಗುತ್ತದೆ. ಆಕೌಂಟ್ ನಂ. ೧ ರಲ್ಲಿ ನಾವು ಏನು ಹಣ ಕಟ್ಟುತ್ತೇವೆ ಅಷ್ಟು ದುಡ್ಡನ್ನು ನಾವೇ ಉಪಯೋಗ ಮಾಡಿಕೊಳ್ಳುವುದಕ್ಕೆ ಗವರ್ನಮೆಂಟ್ ಆರ್ಡರ್ ಕಳಿಸುತ್ತೇವೆ ಎಂದು ಮೊನ್ನೆ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಪ್ರಶ್ನೆ ಕೇಳಿದಾಗ ಹೇಳಿದಿರಿ. ಆದರೆ ನನಗೆ ಕೊಟ್ಟಿರುವ ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದೀರಿ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಅವರು ವರ್ಗ-೧ ರಲ್ಲಿ ಯಾವ ಯಾವ ಹಣವನ್ನು ವಸೂಲು ಮಾಡುತ್ತಾರೆ ಅದನ್ನು ಅವರೇ ಕಟ್ಟಿಕೊಳ್ಳಲಿಕ್ಕೆ ಸಾಧ್ಯತೆ ಇದೆ. ಅವರಿಗೆ ಇರತಕ್ಕಂಥ ತೊಂದರೆ, ಒಂದು ಸಲಕ್ಕೆ ೧೫ ಸಾವಿರ ರೂಪಾಯಿಗಿಂತ ಹೆಚ್ಚಿನ ಹಣವನ್ನು ಮಂಡಲ ಪಂಚಾಯಿತಿಯವರು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲದೇ ಇದ್ದಾಗ ಅದು ಜಿಲ್ಲಾ ಪರಿಷತ್ತಿಗೆ ಹೋಗುತ್ತದೆ. ಅದು ಜಿಲ್ಲಾ ಪರಿಷತ್ತಿನವರ ಹಣ ಆಗುವುದಿಲ್ಲ. ಅವರಿಗೆ ಹಣ ವ್ಯಯ ಮಾಡುವುದರಲ್ಲಿ ಹೊಡೆತ ಬೀಳುತ್ತದೆ. ಮಾನ್ಯ ಸದಸ್ಯರಾದ ಮನೋರಮಾ ಮಧ್ವರಾಜ್‌ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನಾನು ಆಗಲೇ ಹೇಳಿದ್ದೇನೆ. ನಾವು ಸರ್ಕಾರದ ಆಜ್ಞೆಯನ್ನು ಒಂದು ವಾರ ದೊಳಗೆ ಹೊರಡಿಸುತ್ತೇವೆ. ಅದಕ್ಕೆ ಯಾವುದೇ ರೀತಿಯಿಂದ ಗರಿಷ್ಠ ಮಿತಿಯನ್ನು ಹಾಕುವುದಿಲ್ಲ, ಎಷ್ಟು ಹಣವನ್ನಾದರೂ ಖರ್ಚು ಮಾಡಬಹುದು ಎಂದು. ಅದಕ್ಕಿಂತ ಪೂರ್ವದಲ್ಲೇ ಈ ಪ್ರಶ್ನೆ ತಯಾರಾಗಿದ್ದರಿಂದ ಪ್ರಾಯಶಃ ಈ ಉತ್ತರ ಬಂದಿದೆ. ಈಗಾಗಲೇ ಆಜ್ಞೆ ಪ್ರಕಟಣೆಗೊಂಡಿದೆ. ಮಂಡಲ ಪಂಚಾಯಿತಿಯವರು ವರ್ಗ-೧ರಲ್ಲಿ ಖರ್ಚು ಮಾಡುವಾಗ ೧೫ ಸಾವಿರ ರೂಪಾಯಿಗಿಂತಲೂ ಹೆಚ್ಚು ಹಣವನ್ನೂ ಕೂಡ ಅವರು ಖರ್ಚು ಮಾಡಬಹುದು ಎಂದು ಆಜ್ಞೆಯನ್ನು ಈಗಾಗಲೇ ಹೊರಡಿಸಿದ್ದೇವೆ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ತಾವು ನನಗೆ ಆ ಆರ್ಡರ್ ಕಾಪಿ ಕಳುಹಿಸಿಕೊಡಿ.

ಶ್ರೀ ಎಂ. ಪಿ. ಪ್ರಕಾಶ್.—ನಾನು ಕಳುಹಿಸಿಕೊಡುತ್ತೇನೆ.

ಉಪಾಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಮಾನ್ಯ ಸಚಿವರು ಸಭೆಯ ಮುಂದಿಡಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೆ, ದಿನಾಂಕ ೨೯-೩-೮೯ರಂದು ಲಿಖಿತ ಮೂಲಕ ಉತ್ತರಿಸ ಬೇಕಾದ ೧೨ನೇಯ ಪಟ್ಟಿಯಲ್ಲಿ ೩೨ ಪ್ರಶ್ನೆಗಳ ಪೈಕಿ ಈ ಕೆಳಕಂಡ ಪ್ರಶ್ನೆಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ಪ್ರಶ್ನೆಗಳ ಉತ್ತರಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಬೆಳಗಾವಿ ಜಿಲ್ಲಾ ಪರಿಷತ್ತಿಗೆ ನೀಡಿದ ಹಣ

೪೭೩ (೪೨೮) ಶ್ರೀ ಪಲ್ಲಾರಿಗೌಡ ಎನ್. ಪಾಟೀಲ್.—ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮಣ್ಣು ಒಡ್ಡು ಹಾಕಲು ಕಳೆದ ಎರಡೂ ವರ್ಷಗಳಲ್ಲಿ ಬೆಳಗಾವಿ ಜಿಲ್ಲಾ ಪರಿಷತ್ತಿಗೆ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು ?

ಆ) ಕೂಲಿ ಜನರಿಗಾಗಿಯೇ ಇದ್ದ ಈ ಕೆಲಸವನ್ನು ಕೈಕೊಳ್ಳದಿದ್ದು ಇವನ್ನು ಬಾಡಿಗೆ ಬುಲ್‌ಡೋಜರ್‌ನಿಂದ ಮಣ್ಣು ಒಡ್ಡು ಹಾಕಿಸುತ್ತಿರುವುದು ನಿಜವೇ ?

ಇ) ಬುಲ್‌ಡೋಜರಿಗೆ ನೀಡಿರುವ ಬಾಡಿಗೆ ಎಷ್ಟು ಹಾಗೂ ಯಾರು ಯಾರಿಗೆ ಕೊಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

ಅ) ೧೯೮೭-೮೮ರಲ್ಲಿ ೫೨.೩೫ ಲಕ್ಷ ರೂ. ಗಳು
೧೯೮೮-೮೯ರಲ್ಲಿ ೬೪.೧೭೦ —,,—

ಆ) ನಿಜ.

ಇ) ೧೯೮೭-೮೮ರಲ್ಲಿ ೧೦.೯೫೬ ಲಕ್ಷ ರೂ.ಗಳು
೧೯೮೮-೮೯ರಲ್ಲಿ ೧೦.೧೫೩ ಲಕ್ಷ ರೂ.ಗಳು

ತಾಲ್ಲೂಕುವಾರು ವಿವರಗಳನ್ನು ತಃಖ್ತೆ ೧ ಮತ್ತು ೨ರಲ್ಲಿ ಕೊಟ್ಟಿರುತ್ತದೆ.